ನಿಂತಾಗ, 'ನೋಡಮ್ಮ, ನಂಗೆ ದೇವರು ಧಾರಾಳವಾಗಿ ಕೊಟ್ಟಿದ್ದಾನೆ. ಒಡವೆ ವಸ್ತು ಅಂತ ಏನೂ ಕಮ್ಮಿ ಇಲ್ಲ. ಪಾಪ, ಕತ್ತಿನ ಒಂದೆಳೆ ಬಿಟ್ಟು ಏನೂ ಇಲ್ಲ ನಿನ್ನಹತ್ರ. ನೀನೂ ಅಮ್ಮನ ಮಗಳ ಹಾಗೇ ನೋಡಿಕೊಂಡಿದ್ದೀಯ. ಅಮ್ಮನ ನೆನಪಾಗಿ ಈ ಓಲೆ ನಾನಿಟ್ಕೊತೀನಿ. ಇವೆಲ್ಲ ನೀನೇ ತಗೋ' ಅಂದಾಗ ಹೊಳೆದ ಅವಳ ಕಣ್ಣುಗಳನ್ನು ನೋಡಿ ನನಗದೆಷ್ಟು ಕಸಿವಿಸಿಯಾಯಿತೆಂದು ಹೇಗೆ ಹೇಳಬೇಕು? ಯಾವ ಬಿಂಕವಿಲ್ಲದೆ, ಬಾಯಿ ಮಾತಿಗೂ ಬೇಡವೆನ್ನದೆ ಎಲ್ಲವನ್ನು ತೆಗೆದಿಟ್ಟುಕೊಂಡಳು. ಮುಂದೆ ಅದೆಷ್ಟೋ ವರ್ಷಗಳಲ್ಲಿ ನಿಧಾನವಾಗಿ ಕೆಲ ಒಡವೆಗಳನ್ನು ಮಾಡಿಸಿಕೊಂಡಳು. ಒಡವೆ ಅಂಗಡಿಗಳಿಗೆ ಚೀಟಿ ಕಟ್ಟುವುದೇ ಅವಳ ಬದುಕಿನ ಸಂಭ್ರಮ ಎನ್ನುವಂತೆ ಅವಳ ನಡೆ–ನುಡಿ. ಆಗಾಗ ಅವಳ ಹುಟ್ಟುಹಬ್ಬಕ್ಕೆ ಪ್ರಿಯಾಳ ಹುಟ್ಟುಹಬ್ಬಕ್ಕೆ, ನಮ್ಮ ವಿವಾಹದಿನಕ್ಕೆ ದೊಡ್ಡ ದೊಡ್ಡ ಅಂಗಡಿಗಳಿಂದ ಶುಭಾಶಯ ಪತ್ರಗಳು ಬರುತ್ತಿದ್ದವು. ನನಗಂತು ಅಚ್ಚರಿಯಾಗುತ್ತಿತ್ತು. 'ಅದೇನೆ? ಇಷ್ಟು ದೊಡ್ಡ ಅಂಗಡಿಯವರು ನಿನಗೆ ಗ್ರೀಟಿಂಗ್ಸ್ ಕಳಿಸ್ತಾರಲ್ಲ' ಅಂದಿದ್ದೆ. ತುಂಬಾ ನಿರ್ಲಿಪ್ತವಾಗಿ, 'ಹುಂ, ಚೀಟಿ ಕಟ್ತೀನಲ್ಲ, ಕಳಿಸ್ತಾರೆ' ಅಂದಳು. ನಾವು ಕೊಳ್ಳುವ ಸಣ್ಣ–ಪುಟ್ಟ ಒಡವೆಗಳಿಗಾಗಿ ಅವರು ಕಾರ್ಡ್ ಕಳಿಸುತ್ತಿದ್ದುದು ಅಚ್ಚರಿಯ ಸಂಗತಿ ಏನಾಗಿರಲಿಲ್ಲ. ಆಗಾಗ ಆರಕ್ಕೇರುತ್ತಾ ಮೂರಕ್ಕಿಳಿಯುತ್ತಿದ್ದ ಬದುಕು.

ಇದೊಂದು ಸುಳ್ಳಾಗಿದ್ದರೆ...

ಈಗ್ಗೆ ಎರಡು ವರ್ಷಗಳ ಹಿಂದೆ ನಾನು ಸಂಜೆ ಟೀಗೆಂದು ಸಹೋದ್ಯೋಗಿಗಳೊಡನೆ ಆಚೆ ಬಂದಿದ್ದೆ. 'ಏನು... ನಿಂಗೇನಾದರು ಲಾಟರಿ ಹೊಡೀತ?' ಎಂದ ಸಹೋದ್ಯೋಗಿಯ ಮಾತಿಗೆ ಅಚ್ಚರಿಯಾಗಿ 'ಯಾಕೆ' ಅಂದೆ. 'ಮೊನ್ನೆ ನಿನ್ನ ಮಿಸಸ್‌ದು ಅಲುಕ್ಕಾಸಲ್ಲಿ ಭಾರೀ ಶಾಪಿಂಗ್ ಅಂತೆ. ನನ್ನ ಹೆಂಡತಿಯ ಫ್ರೆಂಡೊಬ್ಬಳು ತಂಗಿ ಮದುವೆಗೆ ಒಡವೆ ಖರೀದಿಸಲು ಹೋಗಿದ್ದಳು. ಅವಳ ಜೊತೆ ನನ್ನ ಹೆಂಡತಿಯನ್ನು ಕರೆದೊಯಿದ್ದಳು. ಅಲ್ಲಿ ನಿನ್ನ ಹೆಂಡತಿಯ ವ್ಯಾಪಾರ ಜೋರಾಗಿ ನಡೆಯುತ್ತಿತ್ತಂತೆ. ಮೊದಲಿಗೆ ನನ್ನವಳಿಗೆ ಗೊತ್ತಾಗಲಿಲ್ಲವಂತೆ. ಆಮೇಲೆ ಗುರುತು ಹಿಡಿದು ಮಾತಾಡಿಸಿದಳಂತೆ. ಯಾವುದೋ ಚೀಟಿ ಕಟ್ಟಿದ್ದೆ, ತೆಗೆದುಕೊಳ್ಳಲು ಬಂದೆ ಅಂದರಂತೆ' ಅಂದಾಗ ಬೆಪ್ಪುಬಡಿದಿದ್ದೆ. ಏನು ತೋರಿಸಿಕೊಳ್ಳದೆ ಮಾತು ಹಾರಿಸಿದ್ದೆ. ಮನೆಗೆ ಬಂದ ಮೇಲೆ ಕೇಳಿದಾಗ 'ಅದಾ... ಚೀಟಿ ಮುಗಿದಿತ್ತಲ್ಲ. ಏನು ತಗೋಬಹುದು ಅಂತ ನೋಡೋಕೆ ಹೋಗಿದ್ದೆ' ಎಂದು ಮಾತು ಮುಗಿಸಿದ್ದಳು.

ಎಲ್ಲವು ಸತ್ಯವೇ ಅನ್ನಿಸುತ್ತಿತ್ತು.

ಒಂದು ದಿನ ಇದ್ದಕ್ಕಿದ್ದಂತೆ ಅವಳಿಂದ ಫೋನ್ ಬಂತು. 'ರೀ ಸ್ವಲ್ಪ ಅರ್ಜೆಂಟಾಗಿ ಮನೆಗೆ ಬರ್ತೀರ' ಅಂದಳು. ಗಾಬರಿಯಾಯ್ತು. 'ಏನಾಯ್ತು ರಮ್ಯ' ಅಂದೆ. 'ನೀವು ಬನ್ನಿ ಹೇಳ್ತೀನಿ' ಅಂದಳು. 'ಹುಷಾರಾಗಿದೀಯ ತಾನೆ?' ಎಂದು ಕೇಳಿದಾಗ 'ಹುಂ ರೀ, ನಂಗೇನಾಗಿಲ್ಲ... ಬೇಗ ಬನ್ನಿ' ಅಂತ ಫೋನಿಟ್ಟಿದ್ದಳು. ಅವತ್ತು ಬಸ್ಸಿಗೆ ಕಾಯದೆ ಆಫೀಸಿಂದ ಆಟೊ ಮಾಡಿಕೊಂಡು ನೇರ ಮನೆಗೆ ಹೋದೆ. 'ಪ್ರಿಯಾನ ಟ್ಯೂಷನ್ಗೆ ಬಿಟ್ಟು ಬನ್ರಿ' ಅಂದಳು. 'ಅದೇನು ಹೇಳು ಮೊದಲು' ಅಂದೆ. 'ಇಲ್ಲ, ನಾವಿಬ್ಬರೇ ಮಾತಾಡಬೇಕು. ಮೊದಲು ಅವಳನ್ನು ಬಿಟ್ಟು ಬನ್ನಿ' ಅಂತ ದುಂಬಾಲುಬಿದ್ದಳು. ಬಿಟ್ಟು ಬಂದಮೇಲೆ ಮನೆಬಾಗಿಲು ಮುಚ್ಚಿ ನನ್ನ ಕೈಹಿಡಿದು ರೂಮಿಗೆ ಕರಕೊಂಡು ಹೋದಳು. ನನ್ನನ್ನು ಹಾಸಿಗೆಯ ಮೇಲೆ ಕೂರಿಸಿ ಮೌನವಾಗಿ ಗಾಡ್ರೇಜಿನ ಬಾಗಿಲುತೆರೆದು, ಒಂದು ಕಂದುಬಣ್ಣದ ಚರ್ಮದ ಚೀಲವನ್ನು ತೆಗೆದು, ಹಾಸಿಗೆಯ ಮೇಲೆ ನನ್ನೆದುರಿಗಿಟ್ಟು ತಾನೂ ಎದುರಿಗೆ ಕುಳಿತಳು. ನಾನು ಕುತೂಹಲದಿಂದ 'ಇದೇನು' ಅಂದೆ. ಧ್ವನಿ ತಗ್ಗಿಸಿ, 'ಇವತ್ತು ಆಫೀಸು ಮುಗಿಸಿ ಹೊರಗಡೆ ಬಂದೆ. ಅಷ್ಟರಲ್ಲಿ ಒಂದಕ್ಕೆ ಅವಸರವಾಯ್ತು ಅಂತ ಲೌಂಜಿನಲ್ಲಿದ್ದ ಟಾಯ್ಲೆಟ್ಟಿಗೆ ಹೋದೆ. ಅಲ್ಲಿ ಯಾರೂ ಇರಲಿಲ್ಲ. ಸಿಂಕ್ ಪಕ್ಕದ ಕಟ್ಟೆಯಲ್ಲಿ ಇದಿತ್ತು. ತೆಗೆದು ನೋಡಿದೆ –